ಮಗನ ಮದುವೆಯು ಆಯಿತು. ಬಂದ ಸೊಸೆ ಗೀತಾ ಒಳ್ಳೇ ಮನೆತನದ ಹುಡುಗಿ. ಚೆನ್ನಾಗಿಯೇ ಹೊಂದಿಕೊಂಡಳು. ಅವರಿಗೆ ಒಂದೇ ಬೇಜಾರು ಎಂದರೆ ಬೀಗರಿಗೆ ಕನ್ನಡ ಸಾಹಿತ್ಯದ ಗಂಧಗಾಳಿ ಇರಲಿಲ್ಲ. ಇವರೇನೊ ರನ್ನನ ಬಗ್ಗೆಯೋ ನಾಗಚಂದ್ರನ ಬಗ್ಗೆಯೋ ಹೇಳಿದರೆ ಅವರು ಅಡಕೆ ಕೃಷಿಯ ಬಗ್ಗೆ ಇನ್ನೇನೋ ಹೇಳುವುದು. ಅವರು ಅಡಿಕೆ ಕೃಷಿಯ ಬಗ್ಗೆ ಮಾತಾಡಿದರೆ ಇವರಿಗೆ ನೆನಪಾಗುವುದು 'ಅಡಿಕೆಗೊನೆ ಗಿಲಕಿ ಹಿಡಿದಾಡಿಸುವ' ಅಡಿಗರ 'ಭೂಮಿಗೀತ'ದ ಸಾಲುಗಳು.

ಮಠದಲ್ಲಿಂದಲು ಸಾಕಷ್ಟು ಲಾಭ ಬರತೊಡಗಿದಾಗ ಕಾರ್ತಿಕ ಮನೆಯ ಪುನರುಜ್ಜೀವನದ ಬಗ್ಗೆ ಅಪ್ಪನಲ್ಲಿ ಮಾತೆತ್ತಿದ. ಅಪ್ಪನ ಕಾಲದ ಮನೆಯನ್ನ ಕೆಡವಿ ಕಟ್ಟಿಸುವುದಕ್ಕೆ ಭಟ್ಟರಿಗೆ ಮನಸ್ಸಿರಲಿಲ್ಲವಾದರೂ ಒಂದಿಷ್ಟು ಬದಲಾವಣೆ ಮಾಡಲು ಅವರು ಒಪ್ಪಬೇಕಾಯಿತು. ಹಳೆಯ ಸಿಮೆಂಟ್ ನೆಲ ತೆಗೆದು ಟೈಲ್ಸ್ ಹಾಕುವುದೊ, ಮಣ್ಣಿನ ಗೋಡೆಗಳಲ್ಲಿ ಫಿಕ್ಸ್ ಮಾಡಿದ್ದ ಸ್ವಿಚ್ ಬೋರ್ಡುಗಳು ಅಲುಗಾಡುತ್ತಿರುವುದರಿಂದ ಗೋಡೆಗೆಲ್ಲ ಸಿಮೆಂಟ್‌ಗಿಲಾಯ ಮಾಡಿ ಹೊಸ ಎಲೆಕ್ಟ್ರಿಕ್‌ವೈರಿಂಗ್ ಮಾಡುವುದೊ ಆಗಲೇ ಬೇಕಾದ ಕೆಲಸವಾಗಿತ್ತು. ಅದೇ ಸಮಯದಲ್ಲಿ ಮಠದಲ್ಲಿಯೂ ಒಂದಿಷ್ಟು ಹೊಸ ಕಟ್ಟಡಗಳು ಆಗುತ್ತಿದ್ದುದರಿಂದ ಕಾರ್ತಿಕನಿಗೆ ಮಾಲು ಹೊಂದಿಸಲೂ ಕಷ್ಟವಾಗಲಿಲ್ಲ. ಗುರುಗಳೇ ಆಶೀರ್ವಾದ ಮಾಡಿದ್ದಾರಪ್ಪ ಅಂತ ಮಗನೆಂದ ಬಳಿಕವಂತೂ ಅವರಿಗೆ ಮಗನ ಬಗ್ಗೆ ಹೆಮ್ಮೆಯೇ ಅನ್ನಿಸಿತ್ತು. ಇದೆಲ್ಲ ಮುಗಿಯುವುದರೊಳಗೇ ಅವರ ಬದುಕಿನಲ್ಲಿ ಮಗಳೊಂದು ಗುಂಡಿ ತೋಡಿ ಬಿಟ್ಟಿದ್ದಳು.

★★★

ಕಾರ್ತಿಕ ಹುಟ್ಟಿದ ಏಳು ವರ್ಷದ ನಂತರ ಹುಟ್ಟಿದ್ದಕ್ಕೋ ಮಗಳೇ ಬೇಕೆಂಬ ಅವರ ಆಸೆ ಸತ್ಯವಾಗಿದ್ದಕ್ಕೋ ಅವರಿಗೆ ಮಗಳು ರೋಹಿಣಿಯೆಂದರೆ ಮಗನಿಗಿಂತ ಒಂದು ಕೇಜಿ ಜಾಸ್ತಿ ಪ್ರೀತಿಯೇ. ಓದಿನಲ್ಲಿಯೂ ಮಗನಿಗಿಂತ ಜಾಣೆ. ಇದೆಲ್ಲಕ್ಕಿಂತ ಹೆಚ್ಚಾಗಿ ಅವರ ಕನ್ನಡ ಸಾಹಿತ್ಯದ ವ್ಯಾಖ್ಯಾನಗಳಿಗೆ ಕಿವಿ ತೆರೆದಿಡುವವಳು ಅವಳೇ ಆಗಿದ್ದರಿಂದ ಅವರಿಗೆ ಬಹಳ ಖುಷಿಯಾಗುತ್ತಿತ್ತು. ಒಂದು ಬಾರಿಯಂತೂ ತಾನೂ ಒಂದೆರಡು ಕವಿತೆ ಬರೆದಿದ್ದೇನಪ್ಪ ಅಂತ ತನ್ನದೇ ಮನಃಸ್ಥಿತಿಯನ್ನ ಪ್ರತಿಬಿಂಬಿಸುವ ಕವನಗಳನ್ನ ಭಟ್ಟರೆದುರು ಹಿಡಿದಾಗ ಅವರ ದೃಷ್ಟಿಯಲ್ಲಿ ಮಗಳು ದೊಡ್ಡ ಕವಯಿತ್ರಿಯೇ ಆಗಿಬಿಟ್ಟಿದ್ದಳು. ಈ ಎಲ್ಲಾ ಸೌಭಾಗ್ಯಗಳು ಕೊನೆಗೊಂಡದ್ದು ಮಾತ್ರ ಒಂದು ದಿನ ರಾತ್ರಿ ಆಕೆ ಕವನದ ಹಾಗೆ ಅಪ್ಪನಿಗೊಂದು ಪತ್ರ ಬರೆದಿಟ್ಟು ಸ್ವಿಚ್ ಬೋರ್ಡ್ ಕೆಲಸಕ್ಕೆ ಬರುತ್ತಿದ್ದ ಹರಯದ ಹುಡುಗ ರಫೀಕನ ಜೊತೆ ಓಡಿಹೋದಾಗ.

'ಕತೆ ಕವನ ಅಂತೆಲ್ಲ ಅವಳ ಮನಸ್ಸು ಭ್ರಮಾಲೋಕದಲ್ಲಿ ಓಡುವಂತೆ ಮಾಡಿದವರು ನೀವೇ' ಕಾರ್ತಿಕನ ಆಕ್ಷೇಪಣೆ.

'ವಯಸ್ಸಿಗೆ ಬಂದಕೂಡ್ಲೆ ನಾಕು ಕಡೆ ಜಾತಕ ಕೊಡಿ ಅಂದೆ. ಅಯ್ಯೋ ಪುಟ್ಟ ಮಗು. ಇನ್ನು ನಾಕುವರ್ಷ ಹಾಯಾಗಿರಲಿ ಬಿಡು, ಈಗಲೇ ಏನವಸರ ಅಂದಿರಿ' ರುಕ್ಮಿಣಿಯ ಪ್ರಹಾರ.

ನಿಜಕ್ಕೂ ಈ ಎಲ್ಲದಕ್ಕು ತಾನೇ ಕಾರಣನೆ? ತಾನೇ ಅಪರಾಧಿಯೆ? ಭಟ್ಟರ ಮನಸ್ಸು ತಲ್ಲಣಿಸಿತು.

ಮೂರುದಿನ ಅನ್ನನೀರು ಬಿಟ್ಟು ಕುಳಿತ ಭಟ್ಟರನ್ನ ಕಾರ್ತಿಕನೆ ಒತ್ತಾಯ ಮಾಡಿ ಗುರುಗಳಲ್ಲಿಗೆ ಕರೆದೊಯ್ದ. ಶ್ರೀಮುಖವಾಣಿಯಿಂದ ಸಮಾಧಾನದ ಮಾತುಗಳು ಬಂದವು: 'ಅಲ್ಲ ಭಟ್ಟರೆ, ಈಗ ದೇಶದ ತುಂಬ ನಡೆಯುವುದೇ ನಿಮ್ಮ ಮನೆಯಲ್ಲಿ ನಡೆದದ್ದು ತಾನೆ. ಅದಕ್ಕಾಗಿ ನೀವು ಊಟ ತಿಂಡಿ ಬಿಟ್ಟರೆ ಸಮಸ್ಯೆ ಸುಧಾರಿಸುತ್ತದಾ ಹೇಳಿ. ಧೈರ್ಯ ತಗೋಬೇಕು. ಇದೆಲ್ಲ ದೇವರ ಆಟ. ನಾವು, ನೀವು, ಅವನು, ಅವಳು ಎಲ್ಲ ನಿಮಿತ್ತ ಮಾತ್ರ...'

'ನಾನು ಮಗಳನ್ನ ಸುಸಂಸ್ಕೃತವಾಗಿ ಬೆಳೆಸುವಲ್ಲಿ ಎಲ್ಲಿ ಎಡವಿದೆ ಗುರುಗಳೆ? ಅವಳಿಗೆ ದಿನನಿತ್ಯ